ದಿನಾಂಕಃ 31.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ **3, 4** ಮತ್ತು **6** ನೇ ಪ್ರತಿವಾದಿಗಳ ಪರ ವಕೀಲರಿಂದಃ

ನನ್ನ ಹೆಸರು ದುಂಡವ್ವ. ನನ್ನ ಮದುವೆಯಾಗಿ 56 ವರ್ಷವಾಗಿರಬಹುದು. ನನ್ನನ್ನು ವಡರಟ್ಟಿಗೆ ಮದುವೆ ಮಾಡಿಕೊಟ್ಟಿದ್ದಾರೆ. ನನ್ನ ರೇಶನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳು ಎಲ್ಲಾ ವಡರಟ್ಟಿಯ ವಿಳಾಸದಲ್ಲಿವೆ ಎಂದರೆ ಸರಿ. ಗೌರವ್ವನ ಮದುವೆಯಾಗಿ ಎಷ್ಟು 70 ವರ್ಷಗಳಾಗಿದೆ. ಅವರನ್ನು ಹಡಗಿನಾಳ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಗಂಗವ್ವನ ಮದುವೆಯಾಗಿ 60 ವರ್ಷಗಳಾಗಿದೆ. ಅವರನ್ನು ವಡರಟ್ಟಿಗೆ ಮದುವೆ ಮಾಡಿಕೊಟ್ಟಿದ್ದಾರೆ. ರೇಶನ್‌ಕಾರ್ಡ್ ಮತ್ತು ಆಧಾರ್‌ಕಾರ್ಡ್‌ಗಳು ಎಲ್ಲಾ ವಡರಟ್ಟಿಯ ವಿಳಾಸದಲ್ಲಿವೆ ಎಂದರೆ ಸರಿ. ಮಹಾದೇವ ಮತ್ತು ಬಸಪ್ಪ ಈ ದಾವೆಯಲ್ಲಿ ತಕರಾರು ಸಲ್ಲಿಸಿರುವುದಿಲ್ಲ. ಅವರು ನನ್ನ ತಮ್ಮಂದಿರು. ಮುತ್ತೆಪ್ಪನ ಹೆಂಡತಿ ಸಿದ್ದವ್ವ ಎಂದರೆ ಸರಿ. ಅವರು ನನ್ನ ತಾಯಿ. ಮುತ್ತೆಪ್ಪ ಮತ್ತು ಸಿದ್ದವ್ವರವರಿಗೆ ಮಹಾದೇವ ಮತ್ತು ಬಸಪ್ಪ ಮಾತ್ರ ಗಂಡುಮಕ್ಕಳು ಎಂದರೆ ಸಾಕ್ಷಿ ನನ್ನ ಹೆಸರು ಇಲ್ಲವಾ ಅದರಲ್ಲಿ ಎನ್ನುತ್ತಾರೆ. ಮಹಾದೇವ ಮತ್ತು ಬಸಪ್ಪರವರ ಮದುವೆ ಒಂದೇ ಬಾರಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಮದುವೆ ಆಮಂತ್ರಣ ಪತ್ರದಲ್ಲಿ ಅಡಿವೆಪ್ಪ ಮತ್ತು ಸಿದ್ದವ್ವರವರ ಹೆಸರನ್ನು ಹಾಕಿದ್ದರು ಎಂದರೆ ಸರಿ. ಮಹಾದೇವ ಮತ್ತು ಬಸಪ್ಪರವರ ಮದುವೆಯ ಆಮಂತ್ರಣ ಪತ್ರಿಕೆಯಲ್ಲಿ ನನ್ನ ಹೆಸರು ಹಾಕಿಲ್ಲ ಎಂದರೆ ಸರಿ. ಮುತ್ತೆಪ್ಪನ ಹೆಂಡತಿ ಸಿದ್ದವ್ವ ಮೃತಪಟ್ಟು 16 ವರ್ಷಗಳಾಗಿದೆ. ನಾನು ವಿದ್ಯಾಭ್ಯಾಸ ಮಾಡಿಲ್ಲ.

2. ಮುತ್ತೆಪ್ಪ, ಸಿದ್ದವ್ವ, ಮಹಾದೇವ ಮತ್ತು ಬಸಪ್ಪರವರ ಹೆಸರುಗಳು ರೇಶನ್‌ಕಾರ್ಡ್ ನಲ್ಲಿ ಕೂಡಿ ಇದ್ದವು ಎಂದರೆ ಸರಿ. ನನ್ನ ಮದುವೆಯವಾಗುವ ಮೊದಲು ನಾನು ಮುತ್ತೆಪ್ಪ, ಸಿದ್ದವ್ವ, ಮಹಾದೇವ ಮತ್ತು ಬಸಪ್ಪರವರ ಜೊತೆಗೆ ಕೂಡಿ ಇದ್ದ ಬಗ್ಗೆ ರೇಶನ್ ಕಾರ್ಡ್‌ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಮುತ್ತೆಪ್ಪ ಮತ್ತು ಸಿದ್ದವ್ವರವರ ಮಗಳು ಎಂದು ತೋರಿಸಲು ನಾನು ಜನನ ಪ್ರಮಾಣಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ

ಸರಿ. ನನ್ನ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಮ್ಮ ಮನೆಯವರು ಮತ್ತು ನನ್ನ ಗಂಡನ ಮನೆಯವರು ಸಹ ಮಾಡಿಸಿರುವುದಿಲ್ಲ. ನನ್ನ ಮದುವೆಯಲ್ಲಿ ಮುತ್ತೆಪ್ಪ, ಸಿದ್ದವ್ವ, ಮಹಾದೇವ ಮತ್ತು ಬಸಪ್ಪರವರು ನನ್ನ ಜೊತೆಯಲ್ಲಿ ನಿಂತು ತೆಗೆದಿರುವ ಯಾವುದೇ ಭಾವಚಿತ್ರ ಇಲ್ಲ. ನಾನು ಮುತ್ತೆಪ್ಪ ಮತ್ತು ಸಿದ್ದವ್ವರವರ ಮಗಳು ಹಾಗೂ ಮಹಾದೇವ ಮತ್ತು ಬಸಪ್ಪರವರ ಅಕ್ಕ ಎಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಬಿಟ್ಟು ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನನ್ನ ಮದುವೆಯಲ್ಲಿ ಇದ್ದ ಹಿರಿಯರು ಕೆಲವರು ವಡರಟ್ಟಿಯಲ್ಲಿ ಇರುತ್ತಾರೆ ಮತ್ತು ಇನ್ನು ಕೆಲವರು ಹಡಗಿನಾಳದಲ್ಲಿ ಇದ್ದಾರೆ. ಮುತ್ತೆಪ್ಪರವರ ಮೊದಲನೇಯ ಹೆಂಡತಿ ದೊಡ್ಡವ್ವ ಇದ್ದಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ.

3. ಮುತ್ತೆಪ್ಪ ಮತ್ತು ದೊಡ್ಡವ್ವರವರಿಂದ ಗೌರವ್ವ ಮತ್ತು ಗಂಗವ್ವ ಹುಟ್ಟಿದ್ದಾರೆ ಎಂದು ತೋರಿಸಲು ದಾಖಲೆಗಳು ಇಲ್ಲ. ಗೌರವ್ವ ಮತ್ತು ಗಂಗವ್ವರವರ ಮದುವೆಯ ಭಾವಚಿತ್ರಗಳು ಇಲ್ಲ, ಯಾವುದೇ ಕಾಗದಪತ್ರಗಳು ಇಲ್ಲ. ಮುತ್ತೆಪ್ಪ ಮತ್ತು ದೊಡ್ಡವ್ವರವರಿಗೆ ಗೌರವ್ವ ಮತ್ತು ಗಂಗವ್ವ ಎಂಬ ಮಕ್ಕಳು ಇದ್ದಾರೆ ಎಂದು ತೋರಿಸಲು ನನ್ನ ಬಾಯಿ ಹೇಳಿಕೆ ಬಿಟ್ಟು ಬೇರೆ ದಾಖಲೆ ಇಲ್ಲ ಎಂದರೆ ಸರಿ. ಮುುತ್ತೆಪ್ಪ ಮತ್ತು ದೊಡ್ಡವ್ವ ಗಂಡ ಹೆಂಡತಿ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಮುತ್ತೆಪ್ಪಾ ಮೃತಪಟ್ಟಾಗ ದಾವಾ ಆಸ್ತಿಗಳಿಗೆ ಸಂಭಂದಪಟ್ಟ ಹಾಗೆ ನಾನು ವಾರಸಾದಾರಳಿದ್ದೇನೆ ಎಂದು ನಾನು ಸಂಭಂದಪಟ್ಟ ಇಲಾಖೆಗೆ ಅರ್ಜಿಯನ್ನು ಕೊಟ್ಟಿಲ್ಲ. ನಾನು ಮುತ್ತೆಪ್ಪರವರ ಮಗಳು ಎಂದು ಈ ದಾವೆಯಲ್ಲಿ ಹೇಳಿರುವುದನ್ನು ಬಿಟ್ಟರೆ ಬೇರೆ ಎಲ್ಲೂ ಹೇಳಿಲ್ಲ ಎಂದರೆ ಸರಿ. ಮುತ್ತೆಪ್ಪರವರಿಗೆ ದೊಡ್ಡವ್ವ ಹೆಂಡತಿ ಆಗಿದ್ದು, ಅವರಿಗೆ ಗೌರವ್ವ ಮತ್ತು ಗಂಗವ್ವ ಎಂಬ ಮಕ್ಕಳು ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುತ್ತೆಪ್ಪ ಮತ್ತು ಸಿದ್ದವ್ವರವರ ಮಗಳು ಹಾಗೂ 2 ಮತ್ತು 8 ನೇ ಪ್ರತಿವಾದಿಗಳ ಅಕ್ಕ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ